# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
## ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 15 ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987

**ಪ್ರಾರಂಭಿಕ ಪ್ರಮಾಣ ಪತ್ರ**

ಸಂಖ್ಯೆ:ಮೈನಪ್ರಾ:ನಯೋ:ಪ್ರಾ.ಪ್ರ.ಪ: 81/2025-26    13 MAY 2025 ದಿನಾಂಕ:

ವಿಷಯ: ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ನಾಚನಹಳ್ಳಿ ಗ್ರಾಮದ ಸ.ನಂ.56/1, 56/2 ಮತ್ತು ಇತರೆಗಳ ಜಮೀನಿನಲ್ಲಿ ನಿರ್ಮಿಸಿರುವ "ಎಸ್.ಆರ್.ಎಸ್,ಪ್ರಕೃತಿನಗರ" ಬಡಾವಣೆಯಲ್ಲಿ **ನಿವೇಶನ ಸಂಖ್ಯೆ:33** ರಲ್ಲಿ **ಅಳತೆ: (36.77+40.51)/2 X 38.50 X 1/2 X 38/5 X 35.84** ಚ.ಮೀ ವಿಸ್ತೀರ್ಣ ಪ್ರದೇಶದಲ್ಲಿ ವಸತಿ ಉಪಯೋಗದ ಕಟ್ಟಡ ನಿರ್ಮಿಸುವ ಸಂಬಂಧ ಈ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ:13-09-2024
2. ಈ ಕಛೇರಿ ಸಮ ಸಂಖ್ಯೆಯ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ:03-04-2025.
3. ಪ್ರಾಧಿಕಾರಕ್ಕೆ ಶುಲ್ಕವನ್ನು ಪಾವತಿಸಿರುವ ವಿವರ: ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: NEFT ದಿನಾಂಕ:05-04-2025 ರಂತೆ ರೂ.6,16,000 (ಆರು ಲಕ್ಷದ ಹದಿನಾರು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಸಿರುತ್ತಾರೆ.

*******

**VAI HORIZON INFRASTRUCTURE LLP is represented by Sri M.Mahesh Shenoy** ರವರು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ನಾಚನಹಳ್ಳಿ ಗ್ರಾಮದ ಸ.ನಂ.56/1, 56/2 ಮತ್ತು ಇತರೆಗಳ ಜಮೀನಿನಲ್ಲಿ ನಿರ್ಮಿಸಿರುವ "ಎಸ್.ಆರ್.ಎಸ್,ಪ್ರಕೃತಿನಗರ" ಬಡಾವಣೆಯಲ್ಲಿ **ನಿವೇಶನ ಸಂಖ್ಯೆ:33** ರಲ್ಲಿ **ಅಳತೆ: (36.77+40.51)/2 X 38.50 X 1/2 X 38/5 X 35.84** ಚ.ಮೀ ವಿಸ್ತೀರ್ಣ ಪ್ರದೇಶದಲ್ಲಿ ವಸತಿ ಉಪಯೋಗದ ಕಟ್ಟಡ ನಿರ್ಮಿಸುವ ಸಂಬಂಧ ಈ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಉಲ್ಲೇಖ(1) ರಂತೆ ಅರ್ಜಿ ಸಲ್ಲಿಸಲಾಗಿತ್ತು. ಉಲ್ಲೇಖ (2) ರಲ್ಲಿನ ಈ ಕಛೇರಿ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಿಲು ಸೂಚಿಸಲಾಗಿತ್ತು.

ಉಲ್ಲೇಖ (3) ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಆದ್ದರಿಂದ ಪ್ರಾರಂಬಿಕ ಪ್ರಮಾಣ ಪತ್ರಗಳನ್ನು ಈ ಕೆಳಗಿನ ನಿಬಂಧನೆಗಳೊಂದಿಗೆ ನೀಡಲಾಗಿದೆ.

<u>ನಿಬಂಧನೆಗಳು</u>

1. ಈ ಪ್ರಾರಂಭಿಕ ಪ್ರಮಾಣ ಪತ್ರ ನೀಡಿದ ದಿನಾಂಕದಿಂದ ಕಟ್ಟಡ ನಿರ್ಮಿಸಲು ಎರಡು ವರ್ಷ ಮಾತ್ರ ಕಾಲಾವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ಕಟ್ಟಡ ಕಟ್ಟದಿದ್ದಲ್ಲಿ ಪುನಃ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಯನ್ನು ಅಂದಿನ ನಿಯಾಮಾವಳಿಯಂತೆ ಪರಿಶೀಲಿಸಲಾಗುವುದು.
2. ಕಟ್ಟಡ ನಿರ್ಮಾಣ ಸಂಬಂಧ ರಹದಾರಿಯನ್ನು ಸಕ್ಷಮ ಪ್ರಾಧಿಕಾರ/ಪಂಚಾಯಿತಿಯಿಂದ ಪಡೆದ ನಂತರವೇ ಕಾಮಗಾರಿ ಪ್ರಾರಂಭಿಸತಕ್ಕದ್ದು.
3. ರಹದಾರಿದಾರರು ಈ ಪ್ರಾಧಿಕಾರದ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಜಾಗವನ್ನು ಆಕ್ರಮಿಸಬಾರದು.
4. ಪಕ್ಕದವರ ಆಸ್ತಿಗಳಿಗೆ ಅಪಾಯವಾಗದಂತೆ ಕೆಲಸ ಮಾಡಬೇಕು.
5. ಆಜುಬಾಜು ಮನೆಯವರಿಗೆ ಮತ್ತು ಸಾರ್ವಜನಿಕರಿಗೂ ಸಹ ತೊಂದರೆ ಇಲ್ಲದಂತೆ ಮತ್ತು ಹಕ್ಕಿಗೆ ಬಾಧಕವಾಗದಂತೆ ನಿಮ್ಮ ಮನೆ ಕಟ್ಟಲು ಬಳಸಿದ ನೀರು ಪ್ರಾಧಿಕಾರದ ಒಳಚರಂಡಿಗೆ ಹರಿಯುವಂತೆ ಮಾಡಬೇಕು.
6. ಮಳೆ ನೀರು ಪ್ರಾಧಿಕಾರದ ಜಮೀನು ಅಥವಾ ರಸ್ತೆಯ ಮೇಲೆ ಸುರಿಯದಂತೆ ಕೆಳಗಿನವರೆಗೂ ಗೋಡೆಗೆ ಲಗತ್ತಾಗಿ ಪೈಪ್ ಮುಖಾಂತರ ಮೋರಿಗೆ ಬಿಡತಕ್ಕದ್ದು.

7. ಬಾಗಿಲು/ಯಾ ಬೇಸ್‌ಮೆಂಟ್ ಲೆವೆಲ್ ಬೀದಿಮಟ್ಟಕ್ಕಿಂತ ಎತ್ತರವಾಗಿರತಕ್ಕದ್ದು.

8. ನಿಮ್ಮ ಮನೆಯ ಸೂರಿನ ನೀರು ಅಕ್ಕಪಕ್ಕದವರ ಮನೆಯ ಪ್ರವೇಶದಲ್ಲಿ ಬೀಳಕೂಡದು ಮತ್ತು ಬಚ್ಚಲು ಮನೆ ನೀರನ್ನು ಪ್ರಾಧಿಕಾರದ ಒಳಚರಂಡಿಗೆ ಹರಿಯುವಂತೆ ಮಾಡಬೇಕು.

9. ನಿವೇಶನದ ತುದಿ(ಅಂಚು)ವರೆಗೆ ಚೆಜ್ಜಾ ಮತ್ತು ಬಾಲ್ಕನಿಯಗಳನ್ನು ವಿಸ್ತರಿಸಬಾರದು ಹಾಗೂ ಪ್ರೊಜೆಕ್ಷನ್‌ಗಳು ನಿಯಮಾನುಸಾರವೇ ಇರಬೇಕು. ಯಾವುದೇ ಸಂಧರ್ಭದಲ್ಲಿ ಮನೆಯ ನೀರು ಅಕ್ಕಪಕ್ಕದ ನಿವೇಶನಗಳಿಗೆ ಬೀಳಬಾರದು.

10. ಛಾವಣಿಗಳನ್ನು ಬೆಂಕಿಯ ಅನಾಹುತಗಳಿಗೆ ಒಳಪಡುವ ಸಾಮಾಗ್ರಿಗಳಿಂದ ಕಟ್ಟಿಸಕೂಡದು.

11. ಕಟ್ಟಡ ಕೆಲಸ ಮಾಡಿಸುವ ಮುನ್ನ ಕಟ್ಟಡದ ಹದ್ದುಬಸ್ತನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಅಜಮಾಯಿಸಿ ಗುರ್ತು ಮಾಡಿಸಿಕೊಂಡು ಕೆಲಸ ಪ್ರಾರಂಭಿಸಬೇಕು.

12. ಈ ಪ್ರಾರಂಭಿಕ ಪ್ರಮಾಣ ಪತ್ರ ಮಂಜೂರಾತಿಯಿಂದ ಕಟ್ಟಡದ ನಿವೇಶನಕ್ಕೆ ನಿಮಗೆ(ಲೈಸೆನ್ಸ್‌ದಾರರಿಗೆ) ಇದಕ್ಕೆ ಮೊದಲು ಇಲ್ಲದ ಹಕ್ಕು ಈಗ ಹೊಸದಾಗಿ ಉಂಟಾಗಿರುವದಿಲ್ಲ ಮತ್ತು ಇತರರಿಗೆ ಇರಬಹುದಾದ ಹಕ್ಕಿಗೆ ಯಾವ ಕುಂದು ಉಂಟಾಗುವುದಿಲ್ಲ, ಯಾವುದೇ ಸಿವಿಲ್ ವ್ಯಾಜ್ಯಕ್ಕೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

13. ಹೊಗೆ ಹೋಗಲು ಇರತಕ್ಕ ಚಿಮಣಿಗಳು ಮಾಳಿಗೆ ಮಟ್ಟಕ್ಕಿಂತ ನಾಲ್ಕು ಅಡಿ ಕಡಿಮೆ ಇಲ್ಲದಂತೆ ಎತ್ತರಿಸಿ ಕಟ್ಟಬೇಕು.

14. ಪ್ರಾಧಿಕಾರದ ಅಧಿಕಾರಿಗಳು ಬಂದು ಕೇಳಿದಲ್ಲಿ ತೋರಿಸಲು ಪ್ರಾರಂಭಿಕ ಪ್ರಮಾಣ ಪತ್ರದ ಪ್ರತಿ ಮತ್ತು ಅನುಮೋದಿತ ನಕ್ಷೆ ಸಹ ಕಟ್ಟಡ ಕಟ್ಟುವ ವೇಳೆಯಲ್ಲಿ ನಿಮ್ಮ ಬಳಿ ಸದಾ ಸಿದ್ದವಿರಬೇಕು. ಕಟ್ಟಡ ಕಟ್ಟುವ ನಿವೇಶನದ ಮುಂಭಾಗ ಅನುಮೋದಿತ ನಕ್ಷೆಯ ಒಂದು ಪ್ರತಿಯನ್ನು 3 ಅಡಿ x 2 ಅಡಿ ಅಗಲದ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು ಕಡ್ಡಾಯ.

15. ಕಟ್ಟಡದ ನಿವೇಶನದಲ್ಲಿ ಪಾಯಕ್ಕೆ ಹೊರತುಪಡಿಸಿ ಬೇರೆ ಹಳ್ಳ ತೆಗೆಯಕೂಡದು.

16. ಕೆಲಸ ಪೂರೈಸಿದ ಒಂದು ತಿಂಗಳ ಒಳಗಾಗಿ ಲಿಖಿತ ಮೂಲಕ ಪ್ರಾಧಿಕಾರದ ಕಛೇರಿಗೆ ತಿಳುವಹಿಸಿ ಕಟ್ಟಡ ಪೂರ್ಣಗೊಂಡ ಅರ್ಹತಾ ಪತ್ರವನ್ನು ಪಡೆದುಕೊಳ್ಳತಕ್ಕದ್ದು.

17. ಈ ಪ್ರಾರಂಭಿಕ ಪ್ರಮಾಣ ಪತ್ರದ ಬಗ್ಗೆ ಯಾವುದೇ ಸಂಶಯವಿದ್ದಲ್ಲಿ ಕಟ್ಟಡ ಪ್ರಾರಂಭಿಸುವ ಮುನ್ನ ಪ್ರಾಧಿಕಾರದಿಂದ ಸ್ಪಷ್ಟೀಕರಣ ಪಡೆಯಬೇಕು.

18. ವಿದ್ಯುತ್ ಮಾರ್ಗ ಅಥವಾ ನೀರು/ಒಳಚರಂಡಿ ಸಂಪರ್ಕ ಪಡೆಯಲು ರಸ್ತೆ ಅಗೆಯಬೇಕಿದ್ದಲ್ಲಿ, ಸಂಬಂಧಪಟ್ಟ ಪ್ರಾಧಿಕಾರದ ಪೂರ್ವಾನುಮತಿ ಪಡೆಯತಕ್ಕದ್ದು.

19. ಸದರಿ ಕಡತವನ್ನು ಲೆಕ್ಕಪರಿಶೋಧನೆ ಒಳಪಡಿಸಿದಾಗ ಲೆಕ್ಕಪರಿಶೋಧನೆ ಸಮಯದಲ್ಲಿ ಪಾವತಿಸಿ ಶುಲ್ಕದ ಬಗ್ಗೆ ಆಕ್ಷೇಪಣೆ ಎತ್ತಿದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾವತಿಸತಕ್ಕದ್ದು.

20. ತಪ್ಪು ಮಾಹಿತಿ/ದಾಖಲೆಗಳನ್ನು ಒದಗಿಸಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆದರೆ ಸದರಿ ಪ್ರಾರಂಭಿಕ ಪ್ರಮಾಣ ಪತ್ರ ಸ್ವಯಂ ರದ್ದಾಗುತ್ತದೆ.

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಇವರಿಗೆ.

**VAI HORIZON INFRASTRUCTURE LLP**
**is represented by Sri M.Mahesh Shenoy**
#1143, ಸಿ.ಹೆಚ್-1ಎ, ಗೀತಾ ರಸ್ತೆ,
ಚಾಮರಾಜಪುರಂ, ಮೈಸೂರು-570005.